ಅಮೆಂಡ್‌ಮೆಂಟ್ ಆ್ಯಕ್ಟ್' (ಸಿಎಎ) ಕುರಿತು ಚರ್ಚೆ ಎದ್ದಿತ್ತು. ಆ ಮಂಥನದ ಸಂದರ್ಭದಲ್ಲೇ ನನಗೆ ಬಾಲ್ಯದ ಅನುಭವಗಳೆಲ್ಲ ಕಾಡಲಾರಂಭಿಸಿದವು. ನಮ್ಮ ಸಮಾಜದಲ್ಲಿ ಜಾತಿ ಪದ್ಧತಿಯು ಆಧುನಿಕತೆಯ ನಡುವೆಯೂ ಒಪ್ಪಿತ ಸತ್ಯವಾಗಿ ಇರುವುದು ಕಹಿ. ಆ ಕಹಿಯಲ್ಲೇ ಬೆಳೆದ ನಾನು ಅರಿವಿನ ಸಿಹಿ ಹಣ್ಣು ಎಟುಕಿಸಿಕೊಳ್ಳಲು ಕಷ್ಟ ಪಟ್ಟವನು. ಹೀಗಾಗಿ, ನನ್ನ ಆ ಎಲ್ಲವನ್ನೂ ಕೃತಿಯಲ್ಲಿ ಮೂಡಿಸಲು ನಿರ್ಧರಿಸಿದೆ.

◆ **ನೀವು ಒಡಿಶಾದವರು. ನಿಮ್ಮ ಕೃತಿಯ ಪ್ರಕಾಶಕರು ನಾಗಪುರದವರು. ಬೇರೆ ಬೇರೆ ರಾಜ್ಯಗಳಲ್ಲಿ ಇರುವ ನಿಮ್ಮ ನಡುವೆ ಸಮಾನಮನಸ್ಕತೆ ಮೂಡಿದ್ದು ಹೇಗೆ?**

ಯೋಗೇಶ್ ಮೈತ್ರೇಯಾ ನಾಗಪುರದ ಕವಿ. ಅವರಲ್ಲೂ ದಮನಿತರ ಸಂವೇದನೆ ಇದೆ. ಅವರು 'ಪ್ಯಾಂಥರ್ಸ್ ಪಾ' ಎಂಬ ಪ್ರಕಾಶಕ ಸಂಸ್ಥೆಯನ್ನು ಕಷ್ಟಪಟ್ಟು ಕಟ್ಟಿದ್ದಾರೆ. ನಾವಿಬ್ಬರೂ ಪರಸ್ಪರ ಅನೌಪಚಾರಿಕವಾಗಿ ಮಾತಾಡುವಾಗ, ಕೆಲವೇ ನಿಮಿಷಗಳಲ್ಲಿ ನನ್ನ ಪುಸ್ತಕವನ್ನು ಅವರು ಮುದ್ರಿಸುವ ವಿಷಯ ನಿರ್ಧರಿತವಾಯಿತು. ದಲಿತ ಸಂವೇದನೆಗಳಿಗೆ ಭಾಷೆ, ಗಡಿಯ ಹಂಗು ಎನ್ನುವುದೇನೂ ಇರಬೇಕಾಗಿಲ್ಲ. ಅಂಬೇಡ್ಕರ್ ಅವರ ಜಾತಿವಿರೋಧಿ ನಿಲುವನ್ನು ಕಣ್ಣಿಗೊತ್ತಿಕೊಂಡ ಎಲ್ಲರ ನಡುವೆಯೂ ಸಂವಾದ ಸಾಧ್ಯ. ಅವರು ನನ್ನ ಪ್ರಕಾಶಕರಾದದ್ದಕ್ಕೆ ಖುಷಿ ಇದೆ.

◆ **ದಲಿತರು, ದಮನಿತರನ್ನು ಈ ಸಮಕಾಲೀನ ಸಂದರ್ಭದಲ್ಲಿ ರಾಜಕಾರಣಿಗಳು ಬಳಸಿಕೊಳ್ಳುತ್ತಿರುವ ಬಗೆಯನ್ನು ನೀವು ಹೇಗೆ ಅರ್ಥೈಸುವಿರಿ?**

ಯಾವುದೇ ಪಕ್ಷ ಇರಲಿ, ದಲಿತರನ್ನು ಮತಗಳಾಗಿ ನೋಡುತ್ತಿರುತ್ತದೆ. ಕಾಂಗ್ರೆಸ್ ಕೂಡ ಇದನ್ನೇ ಮಾಡಿಕೊಂಡು ಬಂದಿದ್ದು. ಈಗ ಆರ್‌ಎಸ್‌ಎಸ್‌ನವರು ಅಂಬೇಡ್ಕರ್ ಅವರನ್ನು ಈ ನಿಟ್ಟಿನಲ್ಲೇ ತಮ್ಮವರನ್ನಾಗಿ ಮಾಡಿಕೊಳ್ಳಲು ಹೆಣಗುತ್ತಿದ್ದಾರೆ. ಅಂಬೇಡ್ಕರ್ ಈಗ ಸಶಕ್ತ ಸಂಕೇತ. ಅದನ್ನು ಕಾಂಗ್ರೆಸ್ ಬಳಸಿಕೊಳ್ಳಬಹುದಾಗಿತ್ತು. ಹಾಗೆ ಮಾಡಲು ಸಮರ್ಪಕ ಯೋಜನೆಗಳಿರಬೇಕು. ರಾಜಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರವೇ ಇದೆ. ಆದರೆ, ಮೇಲಿಂದ ಮೇಲೆ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿದ್ದರೂ ತಡೆಗಟ್ಟಲು ಅದು ಏನೂ ಮಾಡುತ್ತಿಲ್ಲ. ಅಂಬೇಡ್ಕರ್ ನೆಚ್ಚಿಕೊಂಡವರ ಚಳವಳಿ ಐದು ವರ್ಷಗಳಿಂದ ಇನ್ನೂ ಪ್ರಬಲವಾಗಿದೆ. ಹೀಗಾಗಿ ರಾಜಕಾರಣಗಳ ಅನುಕೂಲಸಿಂಧುತ್ವ ಸೂಕ್ಷ್ಮಮತಿಗಳಿಗೆ ಚೆನ್ನಾಗಿ ತಿಳಿದಿದೆ.

◆ **ನೀವು ಆಕ್ಸ್‌ಫರ್ಡ್‌ನಲ್ಲಿ ಕಲಿತವರು. ಅಲ್ಲಿ ಬೇರೆ ದೇಶಗಳ ಜನರ ಜತೆ ಬೆರೆತ ಮೇಲೆ ದಲಿತ ಸಂವೇದನೆಗೆ ಏನೇನು ಸೇರಿಕೊಂಡಿತು?**

ಯುಕೆಯಲ್ಲಿ ಇರುವ ಜಮೈಕಾ, ಆಫ್ರಿಕಾ ದೇಶಗಳಿಂದ ಬಂದ ವಲಸಿಗರೂ ತರತಮದ ಅನುಭವ ಉಣ್ಣುತ್ತಿದ್ದಾರೆ. ಆದರೆ, ಭಾರತದಲ್ಲಿ ಇರುವಷ್ಟು ತರತಮ ಕ್ರೌರ್ಯ ಬೇರೆಲ್ಲೂ ಇಲ್ಲವೆನ್ನುವುದು ನನಗೆ ಗೊತ್ತಾಯಿತು. ಇಲ್ಲಿ ಮೇಲ್ಜಾತಿಯ ಜನ ಆಸ್ತಿ, ಶಿಕ್ಷಣ, ಜಾತ್ರೆ, ಹಬ್ಬ-ಆಚರಣೆಗಳು, ರಾಜಕೀಯ ಎಲ್ಲವನ್ನೂ ತಮ್ಮ ಹಿಡಿತಕ್ಕೆ ತೆಗೆದುಕೊಂಡು ದಲಿತರನ್ನು ಆಡಿಸುತ್ತಾರೆ. ಇದರ ಸ್ವರೂಪ ಬದಲಾಗುತ್ತದೆಯೇ ಹೊರತು ಆಡಿಸುವುದು ನಿಲ್ಲುತ್ತಿಲ್ಲ. ಆಡಿಸುವವರು, ಆಡಿಸಿಕೊಳ್ಳುವವರಿಗೆ ಜಗತ್ತಿನ ಅರಿವೇ ಇರುವುದಿಲ್ಲ. ತಮ್ಮದೇ ಲೋಕದಲ್ಲಿ ಎಲ್ಲರೂ ಹಾಗೆಯೇ ಇದ್ದುಬಿಟ್ಟಿದ್ದಾರೆ. ದೊಡ್ಡ ದೊಡ್ಡ ಮಾತಾಡುತ್ತಾರೆ. ಇದು ನನ್ನ ಪ್ರಕಾರ ಮಹಾಕ್ರೌರ್ಯ.

◆ **ರಾಜಕಾರಣಿಗಳು ಜಾತಿ ಪದ್ಧತಿಯನ್ನು ಬಳಸುತ್ತಿರುವ ಕ್ರಮ ದಕ್ಷಿಣ ಭಾರತದಲ್ಲಿ ಹಾಗೂ ಉತ್ತರ ಭಾರತದಲ್ಲಿ ಬೇರೆ ತರಹ ಇದೆ ಎಂದು ನಿಮಗೆ ಅನಿಸುತ್ತಿದೆಯೇ?**

ಬಿಹಾರ ಮತ್ತು ಉತ್ತರ ಪ್ರದೇಶ ಹಿಂದೂ ದೇಶದ ನಿರ್ಮಾಣಕ್ಕೆ ಹೃದಯ ಭಾಗಗಳು ಎಂದು ಆರ್‌ಎಸ್‌ಎಸ್ ಭಾವಿಸಿದೆ. ಅಲ್ಲಿ ಊಳಿಗಮಾನ್ಯದಲ್ಲಿ ಇರುವವರಿಗೂ ಹೊರಬರುವ ದಾರಿ ಗೊತ್ತಿಲ್ಲದೇ ಇರುವ ಉದಾಹರಣೆಗಳು ಇವೆ. ಗಟ್ಟಿ ಸಾಹಿತ್ಯ, ಸಾಂಸ್ಕೃತಿಕ ಸುಧಾರಣೆಯೇ ಅಲ್ಲಿ ಆಗಿಲ್ಲ. ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಉದಾಹರಣೆಯಾಗಿ